ಮಂಜೂರಾತಿಗೆ ವಳಪಟ್ಟಿರುತ್ತೆ. ಮುದ್ದಗಿರಿ ತಾರೀಖು 29—9—96 ಮುದ್ದಗಿರಿ, ಕೊರ್ಟಗೆರೆ ತಾರೀಖು 30—9—96 ಕೊರ್ಟಗೆರೆ.

2. ಚಡದರಖಾಸ್ತುದಾರನು ಹರಾಜು ಕೈದಾದ ಕೂಡ್ಲೆ ಹರಾಜ್ ಮೊಬಲಗು ಪೈಕಿ ಕೇಕಡಾ 25 ರೂಪಾಯಿನಂತೆ ಆಗುವ ಮೊಬಲಗನ್ನ ತೇವಣಿ ಕಟ್ಟತಕ್ಕದ್ದು. ಬಾಕಿ ಮೊಬಲಗು ಹರಾಜ್ ಮಂಜೂರ್ಮಾಡಲ್ಪಟ್ಟ ಸಂಗತಿ ಆಮಲ್ದಾರ್ರಿಂದ ಚಡಸವಾಲ್ದಾರ್ರಿಗೆ ತಿಳಿಸಲ್ಪಟ್ಟ ತಾರೀಖು ಮೊದಲು 15 ದಿವಸಗಳ ವಳಗಾಗಿ ಪಾವತಿ ಮಾಡತಕ್ಕದ್ದು. ಪೂರಾ ಹರಾಜ್ ಮೊಬಲಗಿಗೆ ರೂಪಾಯಿ 1ಕ್ಕೆ 1 ಆಣೆಯಂತೆ ಲೋಕಲ್‌ಸೆಸ್ಸ್ ವಸೂಲ್ ಮಾಡಲ್ಪಡುವದು.

3. ಕ್ಲಿಪ್ತಕಾಲದ ವಳಗೇ ಹಣ ಪಾವತಿ ಮಾಡದೆ ತಪ್ಪಿದರೆ ದರಖಾಸ್ತುದಾರರು ತೇವಣಾತಿ ಇಟ್ಟ ಮೊಬಲಗು ಸರಕಾರಕ್ಕೆ ಕೇರಿಸಿಕೊಳ್ಳಲ್ಪಡುವದಲ್ಲದೆ ಹರಾಜಿನಲ್ಲಿ ಪಡದ ಹಕ್ಕನ್ನ ದರಖಾಸ್ತುದಾರನ ಲುಕ್‌ಸಾನಿಗೆ ವಳಪಡಿಸಿ ಪುನಹ ಹರಾಜ್ ಮಾಡಲ್ಪಡುವದು. ಆದರೆ ದುಸರೇ ಹರಾಜಿನಲ್ಲಿ ವುಂಟಾಗುವ ಘಾಯಿದೆ ಭಾಗ, ದರಖಾಸ್ತುದಾರರು ಹೊಂದಲು ಅರ್ಹರಾಗುವದಿಲ್ಲ.

4. ಇಜಾರೆದಾರನು ಹಿಡುವಳಿ ಜಮೀನುಗಳಲ್ಲಿರತಕ್ಕ ಮರಗಳ ಮತ್ತು ಸ್ವಂತ ಅಮರಾಯಿಗಳಲ್ಲಿ ದೊರೆಯುವ ಫಸಲನ್ನ ರೂಢಿಸಕೂಡದು.

5. ಗಾಮು ಅಮರಾಯಿ ಫಲ ಹುಟ್ಟುನಳಿಗಳು ಮೇಲ್ಕಂಡ ಪಸಾರೆ ಜಿನಸಿಗಳಲ್ಲಿ ಆಡಗಿರುವದಿಲ್ಲ.

ಎಂ. ನಾರಾಯಣರಾವ್,
ಡಿಪ್ಯುಟಿ ಕಮ್ಮಿಷನರ್.

ತುಮಕೂರ ಡಿಸ್ಟ್ರಿಕ್ಟ್ ಫಾರೆಸ್ಟ್ಸ್ ಡಿಪಾರ್ಟ್‌ಮೆಂಟ್.

1896ನೇ ಇಸವಿ ಆಗಸ್ಟ್ ತಾರೀಖು 29ರಲ್ಲು.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ತುಮಕೂರು ಡಿಪೋದಲ್ಲಿ ಮತ್ತು ಗುಬ್ಬೀ ತಾಲ್ಲೂಕ ಜನ್ನಶಟ್ಟಿಹಳ್ಳಿ ಪ್ಲಾಂಟೇಷನಿನಲ್ಲಿರುವ ಈ ಕೆಳಗೆ ನಮೂದಿಸಿರುವ ಸಾಮಾನುಗಳನ್ನ 1896ನೇ ಇಸವಿ ಸೆಪ್ಟಂಬರ್ ತಾರೀಖು 22ರಲ್ಲು ತುಮಕೂರು ಡಿಪೋದಲ್ಲಿಯೂ ತಾರೀಖು 24ರಲ್ಲು ಜನ್ನಶಟ್ಟಿಹಳ್ಳಿ ಪ್ಲಾಂಟೇಷನಿನಲ್ಲಿಯೂ ತುಮಕೂರು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರಿಂದ ಹರಾಜು ಮಾಡಲ್ಪಡುತ್ತೆ.

ತುಮಕೂರು ಡಿಪೊ.

ತರಹೆ.	ಸಂಖ್ಯೆ.	ಸಲೆ ಅಡಿ.	ಅಂಗುಲ.	ಸೆಂಟ್ಸ್.
ಕ್ಯಾಸರೀನ ಮರಗಳು ..	249	568	6	3
ಹಳೇ ಬಿದರುಗಳು ..	544			

ಗುಬ್ಬೀ ತಾಲ್ಲೂಕು ಜನ್ನಶಟ್ಟಿಹಳ್ಳಿ ಪ್ಲಾಂಟೇಷನ್.

ತರಹೆ.	ಸಂಖ್ಯೆ.	ಸಲೆ ಅಡಿ.	ಅಂಗುಲ.	ಸೆಂಟ್ಸ್.
ಕ್ಯಾಸರೀನ ಮರಗಳು ..	1190			

ಹರಾಜು ಮೊಬಲಗು ಪಾವತಿ ಆದ ತಾರೀಖು ಲಾಗಾಯತು ಇದರ ನಿಗೇವಾನಿ ಹರಾಜುದಾರನ್ನೇ ಹೊಂದಿರುತ್ತೆ.

ಷರತ್ತುಗಳು—ಹರಾಜ್ ಕೈದಾದ ಕೂಡ್ಲೆ ಕಾಲುಹಿಸ್ಸೇ ಮೊಬಲಗು ತೇವಣಿ ತರೀಕ್ ಹಾಜರ್ಮಾಡಬೇಕು. ಬಾಕಿ ಮೊಬಲಗನ್ನ ಹರಾಜ್ ತಾರೀಖು ಲಾಗಾಯತು 1 ವಾರದವಳಗಾಗಿ ಹಾಜರ್ಮಾಡಬೇಕು. ಇದಕ್ಕೆ ತಪ್ಪಿದರೆ ದುಸರೆ ಹರಾಜು ಮಾಡಲ್ಪಡುವದಲ್ಲದೆ ಲುಕ್ಸಾನಿಗೆ ಮೊದಲು ಹರಾಜ್‌ದಾರನ್ನ ಗುರಿಮಾಡಲ್ಪಡುತ್ತೆ. ಸಾಮಾನುಗಳೆಲ್ಲಾ ಹರಾಜು ತಾರೀಖು ಲಾಗಾಯತು 10 ದಿವಸದವಳಗಾಗಿ ಸಾಗಿಸಿಕೊಳ್ಳಬೇಕು. ಇತರ ತಖ್ಮೀಲುಗಳಿಗೆ 1895ನೇ ಇಸವಿ ಏಪ್ರಿಲ್ 25ನೇ ಮುಕ್ತುಂ ಮೈಸೂರ ಗೆಜೆಟ್ 1ನೇ ಭಾಗದಲ್ಲಿ ಘಾಯಿಷ್ಮಾಗಿರುವ 1895ನೇ ಇಸವಿ ಮಾರ್ಚಿ 15ನೇ ಮುಕ್ತುಂ 15229ನೇ ನಂಬರು ಗವರ್ನ್‌ಮೆಂಟ್ ನೋಟಿಫಿಕೇಷನ್ನೋಡಿ.

ತಾರೀಖು 9ನೇ ಸೆಪ್ಟಂಬರ್ 1896ನೇ ಇಸವಿ.

ತುಮಕೂರು ಡಿಸ್ಟ್ರಿಕ್ಟ್ ಸ್ಟೇಟ್ ಫಾರೆಸ್ಟ್ಸುಗಳ ಬಾಬತು ಕಲ್ಲುಹುಪ್ಪು ಮತ್ತು ಆರಗು ಜಮಾಯಿಸಿಕೊಳ್ಳತಕ್ಕ ಹಕ್ಕನ್ನ 1896ನೇ ಇಸವಿ ಸೆಪ್ಟಂಬರ್ 1ನೇ ತಾರೀಖಿನಲ್ಲಿ ಹರಾಜು ಮಾಡಲಿಲ್ಲವಾದ ಪ್ರಯುಕ್ತ ಪುನಹ ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವದೇನಂದರೆ,—ಮೇಲೆ ನಮೂದಿಸಲ್ಪಟ್ಟಿರುವ ಜಿನಸಿಗಳ ಹರಾಜನ್ನು 1896ನೇ ಇಸವಿ ಆಗಸ್ಟ್ 15ನೇ ಮುಕ್ತುಂ ಮೈಸೂರ ಗೆಜೆಟ್ 2ನೇ ಭಾಗ 753, 754ನೇ ಪುಟಗಳಲ್ಲಿ ಘಾಯಿಸಿರುವ ಷರತ್ತುಗಳನುಸರಿಸಿ, ತುಮಕೂರು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರಿಂದಲಾಗಲಿ ಅಥವಾ ಅವರಿಂದ ನೇಮಿಸಲ್ಪಡುವ ಸಬ್ ಅಸಿಸ್ಟೆಂಟ್ ಕಂಸರ್ವೇಟರವರಿಂದಲಾಗಲಿ 1896ನೇ ಇಸವಿ ಅಕ್ಟೋಬರ್ ತಾರೀಖು 3ನೇ ದಿವಿ 12 ಘಂಟೆಯಲ್ಲಿ ಬಹಿರಂಗವಾಗಿ ತುಮಕೂರು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸಿನಲ್ಲಿ ಹರಾಜ್ ಮಾಡಲ್ಪಡುತ್ತೆ.

ಯಂ. ವೆಂಕಟನಾರಣಪ್ಪ,
ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್.